ಸಂಬಂಧಪಟ್ಟಂತೆ ಅಂದಾಜು ಮಾಡುವವರಿದ್ದಾರೆ, ಇದರ ಜೊತೆಗೆ ಕೋಟೇಷನ್‌ನ್ನೂ ತೆಗೆದುಕೊಂಡು ಖರೀದಿ ಮಾಡಿದ್ದಾರೆ. ಹೀಗಿರುವುದರಿಂದ ಆ ನಿರ್ದೇಶಕರು ಹೋಗಬೇಕಾದ ಅಗತ್ಯವಿಲ್ಲ. ಏಕತೆಂದರೆ ಅದಕ್ಕೆ ಸಂಬಂಧಪಟ್ಟಂತೆ ಲಿಸ್ಟ್ ಇರುತ್ತದೆ. ಆದ್ದರಿಂದ ನಮ್ಮಲ್ಲಿರತಕ್ಕ ಒಬ್ಬ ಐ.ಎ.ಎಸ್. ಅಧಿಕಾರಿ, ಅಲ್ಲಿರತಕ್ಕ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಅಲ್ಲಿರತಕ್ಕ ಯಾರನ್ನಾದರೂ ಒಬ್ಬ ಇಂಜಿನಿಯರ್‌ನ್ನು ಕರೆದುಕೊಂಡು ಹೋಗಿ ಇನ್ನು ಒಂದು ವಾರದೊಳಗಾಗಿ ಯಾದ್ಗೀರ್ ಮತ್ತು ಗುಲ್ಬರ್ಗಾಗಳ ವರದಿಯನ್ನು ಕೊಡಬೇಕೆಂದು ತಿಳಿಸುತ್ತೇನೆ. ಇದರಲ್ಲಿ ಏನಾದರೂ ಅವ್ಯವಹಾರ ನಡೆದಿದೆ ಎಂದು ಕಂಡು ಬಂದರೆ, ಅಥವಾ ಅಗತ್ಯಕ್ಕಿಂತ ಹೆಚ್ಚು ಸಾಮಗ್ರಿಗಳನ್ನು ಖರೀದಿಸಲಾಗಿದೆ ಎಂದು ಕಂಡುಬಂದರೆ ಅಥವಾ ಖರೀದಿಸಿರುವಂಥ ಸಾಮಗ್ರಿಗಳು ಕಳಪೆ ಮಟ್ಟದ್ದಾಗಿದ್ದರೆ ತಾವು ಸೂಚನೆ ಮಾಡಿದಂತೆ ಲೋಕಾಯುಕ್ತದ ಮೂಲಕವೋ ಅಥವಾ ಇನ್ನು ಬೇರೆ ಯಾವುದಾದರ ಮೂಲಕವೋ ಎನ್‌ಕ್ವೈರಿ ಮಾಡಿಸುವ ಕ್ರಮ ಕೈಗೊಳ್ಳುತ್ತೇನೆ.

ಧಾರವಾಡ ಜಿಲ್ಲಾ ಶಿಗ್ಗಾಂವ್ ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ಉಪ ವಿಭಾಗ ಕುರಿತು

2011-ಶ್ರೀ ಮಂಜುನಾಥ್ ಸಿ. ಕುನ್ನೂರು (ಶಿಗ್ಗಾಂವ) : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?:

ಅ) ಧಾರವಾಡ ಜಿಲ್ಲಾ ಶಿಗ್ಗಾಂವ ಜಿಲ್ಲಾಪಂಚಾಯತ್ ಇಂಜಿನಿಯರಿಂಗ್ ಉಪವಿಭಾಗದಿಂದ 1995-96ರಲ್ಲಿ ವಿವಿಧ ಯೋಜನೆಯಡಿ ಮಾಡಿದ ಕೆಲಸಗಳು ಯಾವುದು. ಅದಕ್ಕೆ ತಗುಲಿದ ಖರ್ಚು ಎಷ್ಟು?

ಆ) ಸದರಿ ಕಾಮಗಾರಿಗಳಲ್ಲಿ ಕಳಪೆ ಕಾಮಗಾರಿಗಳು ಆಗಿವೆಯೆಂದು ಹಾಗೂ ಸಾಕಷ್ಟು ಹಣ ಲೋಪ ಆಗಿದೆಯೆಂದು ಸಾರ್ವಜನಿಕರಿಂದ ದೂರುಗಳು ಬಂದಿವೆಯೇ?

ಇ) ಶಿಗ್ಗಾಂವ ಹಿರಿಬೆಂಡಿಗೇರಿ ರಸ್ತೆ 1ನೇ ಕಿ.ಮಿ. ರಸ್ತೆ ದುರಸ್ತಿಯಲ್ಲಿರುವುದು ನಿಜವೇ?

ಈ) ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳು ಏನು?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು) :

ಅ) ಶಿಗ್ಗಾಂವ ಜಿಲ್ಲಾಪಂಚಾಯತ್ ಇಂಜಿನಿಯರಿಂಗ್ ಉಪವಿಭಾಗದಿಂದ 1995-96ನೇ ಸಾಲಿನಲ್ಲಿ ವಿವಿಧ ಯೋಜನೆಗಳ ಅಡಿಯಲ್ಲಿ 145 ಕೆಲಸಗಳನ್ನು ಮಾಡಲಾಗಿದ್ದು, ಸದರಿ ಕೆಲಸಗಳಿಗೆ ಆದ ಖರ್ಚು 181.414 ಲಕ್ಷ ರೂಪಾಯಿಗಳು. (ಕೆಲಸಗಳ ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ).

ಆ) ಅಂತಹ ಯಾವ ದೂರುಗಳೂ ಬಂದಿರುವುದಿಲ್ಲ.

ಇ) ನಿಜ. ಸದರಿ ದುರಸ್ತಿ ಕೆಲಸವು ಪ್ರಗತಿಯಲ್ಲಿದೆ.

ಈ) ಅನ್ವಯಿಸುವುದಿಲ್ಲ.

ಅನುಬಂಧ -1

ಶಿಗ್ಗಾಂವ್ ಜಿಲ್ಲಾಪಂಚಾಯತ್ ಇಂಜಿನಿಯರಿಂಗ್ ಉಪವಿಭಾಗದಲ್ಲಿ 1995-96ನೇ ಸಾಲಿನಲ್ಲಿ ವಿವಿಧ ಯೋಜನೆಗಳ ಅಡಿಯಲ್ಲಿ ತೆಗೆದುಕೊಳ್ಳಲಾದ ಕೆಲಸಗಳ ವಿವರ ಮತ್ತು ಅದಕ್ಕೆ ತಗುಲಿದ ವೆಚ್ಚ

ಕ್ರಮ ಸಂಖ್ಯೆ	ಕೆಲಸದ ವಿವರಗಳು	ಕೆಲಸಗಳ ಸಂಖ್ಯೆ	ವೆಚ್ಚ (ಲಕ್ಷ ರೂ.ಗಳು)
1. ಕಟ್ಟಡಗಳು			
1.	ಸೆಕೆಂಡರಿ ಶಾಲಾ ಕಟ್ಟಡಗಳು	2	1.287
2.	ಪ್ರಾಥಮಿಕ ಆರೋಗ್ಯ ಕೇಂದ್ರಗಳು	2	8.815
3.	ಮೆಟ್ರಿಕ್ ಪೂರ್ವ ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯ ಕಟ್ಟಡನಿರ್ಮಾಣ	1	11.673
4.	ಜಿಲ್ಲಾ ಉಪಯೋಜನೆಯಡಿ ಕೈಗೊಂಡ ಕಾಮಗಾರಿಗಳು-ಕಟ್ಟಡಗಳು	5	2.958
5.	ಧರ್ಮಸ್ಥಳ ಸಮುದಾಯ ಅಭಿವೃದ್ಧಿ ಯೋಜನೆಯ ನೆರವಿನೊಂದಿಗೆ ತೆಗೆದುಕೊಳ್ಳಲಾದ ಕಾಮಗಾರಿಗಳು(ಕಟ್ಟಡಗಳು)	2	0.517
6.	ಐಆರ್‌ಡಿಪಿ ಯೋಜನೆಯಡಿಯಲ್ಲಿ ತೆಗೆದುಕೊಳ್ಳಲಾದ ಪಶು ಚಿಕಿತ್ಸಾಲಯ ಕಟ್ಟಡಗಳು	3	4.016
7.	ಎಂಟನೇ ಪಂಚವಾರ್ಷಿಕ ಯೋಜನೆಯಡಿಯಲ್ಲಿ ತೆಗೆದುಕೊಳ್ಳಲಾದ ಪ್ರಾಥಮಿಕ ಶಾಲಾ ಕಟ್ಟಡಗಳು	14	12.863
8.	ನಗರ ಪ್ರದೇಶಗಳಲ್ಲಿ ತೆಗೆದುಕೊಳ್ಳಲಾದ ಪ್ರಾಥಮಿಕ ಶಾಲಾ ಕಟ್ಟಡಗಳು	1	0.428
9.	ಕಪ್ಪು ಹಲಗೆ ಕಾರ್ಯಕ್ರಮ ಯೋಜನೆಯಡಿಯಲ್ಲಿ ತೆಗೆದುಕೊಳ್ಳಲಾದ ಪ್ರಾಥಮಿಕ ಶಾಲಾ ಕಟ್ಟಡಗಳು	7	2.733
		37	45.290
2. ಕುಡಿಯುವ ನೀರು ಸರಬರಾಜು ಯೋಜನೆಗಳು			
1.	ರಾಷ್ಟ್ರೀಯ ಗ್ರಾಮಾಂತರ ನೀರು ಸರಬರಾಜು ಯೋಜನೆಗಳು	8	16.115
2.	ತ್ವರಿತ ಗ್ರಾಮೀಣ ನೀರು ಸರಬರಾಜು ಯೋಜನೆಗಳು	7	20.679
3.	ಕಿರುನೀರುಕರ ಸರಬರಾಜು ಯೋಜನೆಗಳು	9	9.413
		24	46.206
3. ರಸ್ತೆ ಮತ್ತು ಸೇತುವೆಗಳು			
1.	ಸಿ.ಡಿ. ಕಾಮಗಾರಿಗಳು	3	4.596
2.	ಡಾಂಬರೀಕರಣ ಕಾಮಗಾರಿಗಳು	4	2.026
3.	ರಸ್ತೆಗಳ ಮೇಲ್ಮೈ ಸುಧಾರಣೆ ಮತ್ತು ಡಾಂಬರೀಕರಣ	4.	6.659
4.	ಸೇತುವೆ : ಸಿ.ಡಿ. ನಿರ್ಮಾಣ	7	7.678
5.	ಹರಿಜನವಾಡ ರಸ್ತೆಗಳು	8	7.035
		26	27.994

4. ಸಣ್ಣ ನೀರಾವರಿ

1.	ಕೆರೆ ಹೂಳೆತ್ತುವುದು ಮತ್ತು ಸಾಮೂಹಿಕ ನೀರಾವರಿ ಕೆಲಸಗಳು	3	2.600
2.	ಡಿಪಿಎಪಿ ಕೆಲಸಗಳು (ಪಿಕಪ್ ನಿರ್ಮಾಣ ಇತ್ಯಾದಿ)	5	7.385
		8	9.985
5.	**ಜವಾಹರ ರೋಜಗಾರ ಯೋಜನೆಯಡಿ ತೆಗೆದುಕೊಂಡ ಕಾಮಗಾರಿಗಳು**	5	3.046
6	**ಸ್ಥಳೀಯ ಪ್ರಾದೇಶಿಕ ಅಭಿವೃದ್ಧಿ ಕಾಮಗಾರಿಗಳು (ಲೋಕಸಭಾ ಸದಸ್ಯರ ಅನುದಾನದಲ್ಲಿ)**	7	16.893
7.	**ಉದ್ಯೋಗ ಭರವಸೆ ಯೋಜನೆಯಡಿಯಲ್ಲಿ ತೆಗೆದುಕೊಂಡ ಕಾಮಗಾರಿಗಳು**		
1.	ರಸ್ತೆ ಕಾಮಗಾರಿಗಳು	24	22.333
2.	ನೀರಾವರಿ ಕಾಮಗಾರಿಗಳು	14	9.667
		38	32.000

ಫೋಷ್ಟಾರ :

ಒಟ್ಟು ಕಾಮಗಾರಿಗಳ ಸಂಖ್ಯೆ : 145

ಒಟ್ಟು ವೆಚ್ಚ : 181.414 ಲಕ್ಷಗಳು.

ಶ್ರೀ ಮಂಜುನಾಥ ಸಿ. ಕುನ್ನೂರು : ಮಾನ್ಯ ಅಧ್ಯಕ್ಷರೆ, 1995-96ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತಿ ಇಂಜಿನಿಯರಿಂಗ್ ಉಪ ವಿಭಾಗದಲ್ಲಿ ತೆಗೆದುಕೊಂಡ ಕಾಮಗಾರಿಗಳ ಪಟ್ಟಿಯನ್ನು ಕೇಳಿದ್ದೆ. ಅದರಲ್ಲಿ ಲೋಕಸಭಾ ಸದಸ್ಯರ ಅನುದಾನದಲ್ಲಿ ತೆಗೆದುಕೊಂಡ ಕ್ಷೇತ್ರದ ಕೆಲಸಗಳು, ಹಾಗೂ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಲಿಯಲ್ಲಿ ತೆಗೆದುಕೊಂಡ ಕೆಲಸಗಳ ಬಗ್ಗೆ ತಾವು ನಮೂದು ಮಾಡಿಲ್ಲ. ಅಷ್ಟೇ ಅಲ್ಲದೆ ತಾಲೂಕು ಪಂಚಾಯಿತಿ ಇಂಜಿನಿಯರಿಂಗ್ ಉಪ ವಿಭಾಗದಿಂದ ಸುಮಾರು 1.81 ಕೋಟಿ ರೂ.ಗಳನ್ನು ಖರ್ಚುಮಾಡಲಾಗಿದೆ ಎಂಬುದಾಗಿಯೂ ತಾವು ತಿಳಿಸಿದ್ದೀರಿ. ಈ ಕಾಮಗಾರಿಗಳ ವಿವರಗಳನ್ನೂ ಕೂಡ ತಾವು ನೀಡಿಲ್ಲ. ಆದಾಗ್ಯೂ ಆ ಎಲ್ಲ ಕಾಮಗಾರಿಗಳಲ್ಲೂ ಸಾಕಷ್ಟು ದುರುಪಯೋಗ ಆಗಿದೆ ಎಂದು ಅಲ್ಲಿರತಕ್ಕ ಸ್ಥಳೀಯ ಜಿಲ್ಲಾಪಂಚಾಯಿತಿಯ ಸದಸ್ಯರೂ ಕೂಡ ದೂರನ್ನು ನೀಡಿದ್ದಾರೆ. ನಾನು ನಿರ್ದಿಷ್ಟವಾಗಿ ಹೇಳುತ್ತೇನೆ, ಶಿಗ್ಗಾಂವ್ - ಹಿರೇಕೇರೂರು ರಸ್ತೆಯಲ್ಲಿ ಒಂದನೇ ಕಿ.ಮಿ.ನಲ್ಲಿರುವ ಮುಗಳಿ ಎಂಬಲ್ಲಿ ಮಾಡಿರತಕ್ಕ ಕಾಮಗಾರಿಗೆ ರೋಲರ್‌ನ್ನೂ ಕೂಡ ಹೊಡಿದಿಲ್ಲ. ಕೇವಲ ಮಣ್ಣನ್ನು ಹಾಕಿ ಕೆಲಸಮಾಡಿದ್ದಾರೆ. ಆದ್ದರಿಂದ ಈ ಕೆಲಸವನ್ನೂ ಒಳಗೊಂಡಂತೆ ಎಲ್ಲಾ ಕಾಮಗಾರಿಗಳ ಬಗ್ಗೆ ಜಿಲ್ಲಾಧಿಕಾರಿಯವರಿಂದ ಅಥವಾ ಆರ್.ಡಿ.ಪಿ.ಆರ್. ಕಾರ್ಯದರ್ಶಿಯವರಿಂದ ಡೀಟೇಲ್ ಆಗಿ ಎನ್‌ಕ್ವೈರಿ ಮಾಡಿಸುತ್ತೇನೆಂದು ಇಂಜಿನಿಯರ್‌ರವರ ಬಗ್ಗೆ ಪ್ರಸ್ತಾವನೆ ಬಂದಂಥ ಸಂದರ್ಭದಲ್ಲಿ ತಾವು ಒಪ್ಪಿಕೊಂಡಿದ್ದೀರಿ. ಆದ್ದರಿಂದ ಜಿಲ್ಲಾಧಿಕಾರಿಯವರಿಂದ ಅಥವಾ ತಮ್ಮ ಇಲಾಖೆಯಿಂದ ಎನ್‌ಕ್ವೈರಿ ಮಾಡಿಸಲು ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಎಲ್ಲಾ ಮಾನ್ಯ ಸದಸ್ಯರೂ ಈ ಸದನದ ಒಳಗಡೆ ಲೋಕಲ್ ಟ್ರಿಪ್ಪನ್ನು ಕಾನ್‌ಫರೆನ್ಸ್‌ನ್ನು ನಿಲ್ಲಿಸಿದರೆ ನಾನು ಇಲ್ಲಿ ಸಭೆಯನ್ನು ನಡೆಸಬಹುದು. ದಯವಿಟ್ಟು ಎಲ್ಲರೂ ಕೂತುಬಿಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಪ್ರತಿದಿನ ಹೀಗೆ ಎಲ್ಲಾ ಸದಸ್ಯರೂ ಬಂದು ಸದನದಲ್ಲಿ ಕೂತರೆ ಎಷ್ಟು ಚೆನ್ನಾಗಿ ಕಾಣಿಸುತ್ತದೆ ಗೊತ್ತೇ? ಈ ಸದನ ಬಹಳ ಸುಂದರವಾಗಿ ಕಾಣಿಸುತ್ತದೆ. ಇವತ್ತು ಬಂದಿರುವಂತೆಯೇ ಪ್ರತಿದಿನ ಬಂದರೆ ಬಹಳಷ್ಟು ಚೆನ್ನಾಗಿ ಕಾಣಿಸುತ್ತದೆ..

ಅಧ್ಯಕ್ಷರು : ಅವರನ್ನು ಪ್ರತಿದಿನ ಈ ರೀತಿ ಕೂಡಿಸುವ ಶಕ್ತಿ ನಿಮಗಿದೆ. ಅಷ್ಟು ಮಾಡಿದರೆ ನನಗೂ ಅನುಕೂಲವಾಗುತ್ತದೆ.

ಶ್ರೀ ಎಂ.ಪಿ. ಪ್ರಕಾಶ್ : ಪ್ರತಿದಿನವೂ ಅವರು ಅವಿಶ್ವಾಸ ಗೊತ್ತುವಳಿಯನ್ನು ಏನಾದರೂ ತಂದರೆ....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದು ಮೊದಲನೇ ಸಾರಿ ತಂದಿರತಕ್ಕದ್ದು. ಅದೂ ಕೂಡ ಅನಿವಾರ್ಯವಾಗಿ.

ಶ್ರೀ ಎನ್. ರಾಜಣ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧಪಕ್ಷದ ನಾಯಕರಿಗೆ ಥ್ಯಾಂಕ್ಸ್‌ನ್ನು ಹೇಳಬೇಕಾಗುತ್ತದೆ. ಏಕೆಂದರೆ ಈ ಸದನದ ಚರಿತ್ರೆಯಲ್ಲಿ ಪ್ರಶ್ನೋತ್ತರ ವೇಳೆ ಕೇವಲ ಅರ್ಧ ಗಂಟೆಯಲ್ಲಿ ಮುಗಿದಿದೆ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಸದಸ್ಯರ ಗಮನಕ್ಕೆ ತರುವುದಾದರೆ, ಇದುವರೆಗೆ 181 ಲಕ್ಷರೂ.ಗಳನ್ನು ತಮ್ಮ ಕ್ಷೇತ್ರದಲ್ಲಿ ಖರ್ಚುಮಾಡಿದ್ದೇವೆ. ಅದರಲ್ಲಿ ಲೋಕಸಭಾ ಸದಸ್ಯರ ಅನುದಾನದಲ್ಲಿ ಆಗಿರುವಂಥ ಖರ್ಚಿನ ವಿವರಗಳನ್ನು ತಮಗೆ ತಿಳಿಸುವುದಕ್ಕೆ ಆಗಿಲ್ಲ. ಆದರೆ ಕಟ್ಟಡಗಳು, ಕುಡಿಯುವ ನೀರಿನ ಸರಬರಾಜು ಯೋಜನೆಗಳು, ರಸ್ತೆ ಮತ್ತು ಸೇತುವೆಗಳು, ಸಣ್ಣ ನೀರಾವರಿ, ಜವಾಹರ್ ರೋಜ್‌ಗಾರ್ ಯೋಜನೆಯಡಿಯಲ್ಲಿ ತೆಗೆದುಕೊಂಡ ಕಾಮಗಾರಿಗಳು ಸ್ಥಳೀಯ ಪ್ರಾದೇಶಿಕ ಅಭಿವೃದ್ಧಿ ಕಾಮಗಾರಿಗಳು, (ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಲಿಗೆ ಸಂಬಂಧಪಟ್ಟದ್ದು) ಹೀಗೆ ಲೋಕಸಭಾ ಸದಸ್ಯರ ಅನುದಾನದಲ್ಲಿ 16.88 ಲಕ್ಷ ರೂ.ಗಳ ಕೆಲಸವನ್ನು ನಾವು ತೆಗೆದುಕೊಂಡಿದ್ದೇವೆ. ಅದರ ವಿವರಗಳನ್ನೂ ನಾವು ಇಲ್ಲಿ ಕೊಟ್ಟಿದ್ದೇವೆ. ಉದ್ಯೋಗ ಭರವಸೆ ಯೋಜನೆಯಡಿಯಲ್ಲಿ ರಸ್ತೆ ಕಾಮಗಾರಿಗಳು, ನೀರಾವರಿ ಕಾಮಗಾರಗಳು, ಹೀಗೆ ಒಟ್ಟು 145 ಕಾಮಗಾರಿಗಳನ್ನು ನಿಮ್ಮ ಕ್ಷೇತ್ರದಲ್ಲಿ ತೆಗೆದುಕೊಂಡು ಅದಕ್ಕೆ 181.41 ಲಕ್ಷ - ರೂ.ಗಳನ್ನು ನಾವು ಈಗಾಗಲೇ ಖರ್ಚುಮಾಡಿದ್ದೇವೆ.

12.00 ನೂನ್

ಗುಣಮಟ್ಟದ ಕೆಲಸ ಆಗಿಲ್ಲವೆಂಬ ಆಪಾದನೆ ಏನಿದೆ ಅದರಲ್ಲಿ ಶಿಗ್ಗಾಂವ್ ಮತ್ತು ಹಿರೇಬೆಂಡಿಗೇರಿಯಲ್ಲಿ 80 ಸಾವಿರ ರೂಪಾಯಿ ಹಣ ಒಂದು ಕಿರೋಮೀಟರ್ ರಸ್ತೆ ಕೆಲಸಕ್ಕಾಗಿ ಮಂಜೂರಾತಿಯಾಗಿದೆ. ಅದರಲ್ಲಿ 36,100 ರೂಪಾಯಿಗಳನ್ನು ಮಾತ್ರ ಮುರ್ರಂ ತರಿಸಿ ಹಾಕಲಿಕ್ಕೆ ಮತ್ತು ಕಡಿ (ಜಲ್ಲಿ)ಯನ್ನು ಹಾಕಲಿಕ್ಕೆ ಇಟ್ಟಿರತಕ್ಕದ್ದು ಇದೇ ಕಡಿ(ಜಲ್ಲಿ) • ತಂದಿರುವುದಕ್ಕೆ 13806 ರೂಪಾಯಿಗಳು. ಒಟ್ಟು ಇಲ್ಲಿಯವರೆಗೆ ಖರ್ಚಾಗಿರತಕ್ಕದ್ದು ಕೇವಲ 49 ಸಾವಿರ ರೂಪಾಯಿಗಳು. ಈ 80 ಸಾವಿರ ರೂಪಾಯಿಗಳ ಹಣ ಪೂರ್ತಿ ಖರ್ಚಾಗಿಲ್ಲ. ಒಂದು ವೇಳೆ ತಾವು ಭಾವಿಸಿಕೊಂಡಂತೆ ಕ್ಷಾಮಗಾರಿಗಳು ನಿರ್ದಿಷ್ಟವಾಗಿ ಇಂಥಿಂಥ ಊರಿನಲ್ಲಿ ಇಂಥಿಂಥ ಕಾಮಗಾರಿಗಳ ಗುಣಮಟ್ಟ ಸರಿಯಿಲ್ಲವೆಂದು ತಾವು ಆಪಾದಿಸಿದರೆ, ಈಗಾಗಲೇ ನಾನು ಹಿಂದಿನ ಪ್ರಶ್ನೆಯಲ್ಲಿ ಹೇಳಿದಂತೆ ತಾವು ಬಯಸಿದಂಥ ಅಧಿಕಾರಿಯನ್ನೇ ಅಲ್ಲಿಯ ಮೇಲು ಉಸ್ತುವಾರಿಗೆ ಕಳುಹಿಸಿಕೊಟ್ಟು

ವಿಚಾರಣೆ ಮಾಡಿಸಲಿಕ್ಕೆ ಒಂದು ವಾರದೊಳಗೆ ಆಜ್ಞೆ ಮಾಡುತ್ತೇನೆ. ತಾವು ಅದರ ವಿವರಗಳನ್ನು ಕಳುಹಿಸಿಕೊಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ನನಗೆ ಕೆಲವು ಮಾಹಿತಿಗಳು ಸರ್ಕಾರದಿಂದ ಬರುತ್ತಿಲ್ಲ. ಕ್ಷೇತ್ರವಾರು ಅಥವಾ ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ವಿಚಾರಗಳನ್ನು ನಾವು ಕೇಳುತ್ತೇವೆ. ಸದನವನ್ನು ಇವತ್ತು ಮುಕ್ತಾಯ ಗೊಳಿಸುತ್ತಿದ್ದೀರಿ. ನಾವು ಕ್ಷೇತ್ರದಲ್ಲಿ ಹೋಗುವಂಥ ಪ್ರಸಂಗದಲ್ಲಿ"

ಅಧ್ಯಕ್ಷರು : ಇನ್‌ಸಫಿಷಿಯಂಟ್ ರಿಪ್ಲೈ ಬಂದಿದೆ, ಇನ್‌ಅಡಿಕ್ವೇಟ್ ರಿಪ್ಲೈ.....

ಶ್ರೀ ಸಿ.ಆರ್. ಸಗೀರ್ ಅಹಮದ್ : ಉತ್ತರಗಳೇ ಬರುವುದಿಲ್ಲ.

(ಗೊಂದಲ)

ಅಧ್ಯಕ್ಷರು : ನಾನು ಪುನಃ ಅಧಿವೇಶನ ಕರೆಯುವುದರೊಳಗೆ ವಿದೇಶ ಪ್ರವಾಸ ಮುಗಿಸಿ ಬಂದು ಎಷ್ಟು ಪ್ರಶ್ನೆಗಳಿಗೆ ಉತ್ತರ ಹೋಗಿಲ್ಲ, ಯಾವುಯಾವುದಕ್ಕೆ ಸಮರ್ಪಕವಾಗಿ ಹೋಗಿಲ್ಲ ಎಂಬುದನ್ನು ನೋಡಿ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಯಿಸಿಕೊಂಡು ನಿಮಗೆ ಎಲ್ಲರಿಗೂ ಉತ್ತರ ಕಳುಹಿಸಿಕೊಡುವ ಜವಾಬ್ದಾರಿ ನಾನು ತೆಗೆದುಕೊಳ್ಳುತ್ತೇನೆ.

2) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು): ದಿನಾಂಕ 14ನೇ ಆಗಸ್ಟ್ 1996ರ ಲಿಖಿತ ಮೂಲಕ ಉತ್ತರಿಸುವ 28ನೇ ಪಟ್ಟಿಯಲ್ಲಿನ 81 ಪ್ರಶ್ನೆಗಳ ಪೈಕಿ 52 ಪ್ರಶ್ನೆಗಳ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ. ಅದೇ ರೀತಿಯಲ್ಲಿ ದಿನಾಂಕ 13.8.96ರಂದು ಪ್ರಶ್ನೋತ್ತರಗಳು ನಡೆಯದ ಕಾರಣ ಆ ದಿನ ಸದನದಲ್ಲಿ ಉತ್ತರಿಸಬೇಕಾಗಿದ್ದ 27ನೇ ಪಟ್ಟಿಯಲ್ಲಿನ 15 ಪ್ರಶ್ನೆಗಳ ಪೈಕಿ 9 ಪ್ರಶ್ನೆಗಳ ಉತ್ತರಗಳನ್ನು ಹಾಗೂ ಲಿಖಿತ ಮೂಲಕ ಉತ್ತರಿಸುವ 105 ಪ್ರಶ್ನೆಗಳಕ ಪೈಕಿ 92 ಪ್ರಶ್ನೆಗಳ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಹಣ ದುರುಪಯೋಗವಾಗಿರುವುದು.

1873 - ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತೀರ್ಥಹಳ್ಳಿ ತಾಲ್ಲೂಕಿಗೆ ಸರ್ಕಾರದಿಂದ, 1992-93,1993-94 ಮತ್ತು 1994-95ನೇ ಸಾಲಿನಲ್ಲಿ ಮಂಜೂರಾದ ಇಂದಿರಾ ಆವಾಸ್, ಅಂಬೇಡ್ಕರ್ ಮನೆ ಹಾಗೂ ದಶಲಕ್ಷ ಬಾವಿ ಯೋಜನೆಯಲ್ಲಿ ಕಾಮಗಾರಿ ಪೂರೈಸದೇ ಹಣ ವಿಚರ್ಜು ತೋರಿಸಿ ಹಣ ದುರುಪಯೋಗವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ.

ಆ) ಹಾಗಿದ್ದರೆ, ದುರುಪಯೋಗಕ್ಕೆ ಕಾರಣರಾದ ಅಧಿಕಾರಿಗಳು ಯಾರು ಯಾರು.